



ಇನ್ನೂ ವಿಶೇಷವೇ ಸರಿ. ನಾನು ಕಂಡಂತೆ ಕರ್ನಾಟಕ ರಾಜ್ಯೋತ್ಸವವನ್ನು ಅದ್ದೂರಿಯಾಗಿ ಆಚರಿಸುವವರೆಂದರೆ ಆಟೊ ಚಾಲಕರೇ. ಕನ್ನಡದ ತೇರು ಎಂಬಂತೆ ಆಟೊಗಳನ್ನು ಹೂಗಳಿಂದ, ಚಿತ್ರಗಳಿಂದ, ಹಸಿರು ತಳಿರು ತೋರಣಗಳಿಂದ ಸಿಂಗರಿಸಿ, ನಿಲ್ದಾಣಗಳಲ್ಲಿ ದೊಡ್ಡ ದೊಡ್ಡ ಬ್ಯಾನರ್, ಬಂಟಿಂಗ್ಸ್‌ಗಳನ್ನು ಕಟ್ಟಿ, ಕನ್ನಡ ಧ್ವಜವನ್ನು ಹಾರಿಸಿ, ಸ್ಪೀಕರ್‌ಗಳಲ್ಲಿ ಕನ್ನಡಾಭಿಮಾನದ ಹಾಡುಗಳನ್ನು ಹಾಕಿ, ಆರ್ಕೆಸ್ಟ್ರಾಗಳನ್ನು ಆಯೋಜಿಸಿ, ಜನರಿಗೆ ಸಿಹಿ ಹಂಚಿ, ರಕ್ತದಾನ ಮಾಡಿ ಕನ್ನಡಾಂಬೆಗೆ ಗೌರವ ಸಲ್ಲಿಸುವ ಆಟೊ ಚಾಲಕರ ಬಗ್ಗೆ ಕನ್ನಡಿಗರಾದ ನಾವೆಲ್ಲರೂ ಹೆಮ್ಮೆಪಡಲೇಬೇಕು. ಅದೇ ರೀತಿ ಕನ್ನಡ ಸಿನಿಮಾ ನಿಜವಾದ ಅಭಿಮಾನಿ ದೇವ್ರುಗಳು ಈ ಆಟೊ ಚಾಲಕರೇ ಸರಿ.

ಆಟೊ ರಿಕ್ಷಾದ ಹಿಂಭಾಗವಂತೂ ಸಾಹಿತ್ಯಿಕ ಅಭಿವ್ಯಕ್ತಿಗೆ ವೇದಿಕೆಯೇ ಸರಿ. ಐಟಿ ಬಿಟಿ ಬರಲಿ ಕನ್ನಡವು ಜೊತೆಗಿರಲಿ, ಕನ್ನಡಿಗ, ಕನ್ನಡದ ಕಂದ, ಜೈ ಕನ್ನಡಾಂಬೆ ಎಂಬ ಕನ್ನಡಾಭಿಮಾನವನ್ನೂ, 'ಅತಿ ವೇಗ ತಿಥಿ ಬೇಗ', 'ಅವಸರವೆ ವಡೆ ಪಾಯಸಕ್ಕೆ ಕಾರಣ', 'ಗರ್ಭಿಣಿಯರಿಗೆ ಉಚಿತ', 'ಆರತಿಗೊಂದು ಕೀರುತಿಗೊಂದು' ಎಂಬ ಸಾಮಾಜಿಕ ಸಂದೇಶಗಳನ್ನು, 'ರಿಕ್ಷಾ ಓಡಿಸಿದ್ರೂ ರಿಚ್ ಆಗಿ ಸಾಕ್ತೀನಿ', 'ನೀನಿಲ್ಲದ ನಾನು, ನೀರಿಲ್ಲದ ಮೀನು' ಎಂಬ ಪ್ರೇಮಿಯೊಬ್ಬನ ಅದಮ್ಯ ಪ್ರಣಯವನ್ನೂ, 'ಅಕ್ಕನ ಆಶೀರ್ವಾದ ಭಾವನ ಕಾಣಿಕೆ', 'ತಂದೆ ತಾಯಿಯ ಆಶೀರ್ವಾದ', 'ಮಾ ಕಿ ದುವಾ' ಎಂಬ ಕೃತಜ್ಞತೆಯ ಬರಹಗಳನ್ನು, 'ಶತ್ರುಗಳ ಆಶೀರ್ವಾದ' ಎಂಬ ದೌಲತ್ತಿನ ಬರಹವನ್ನೂ, 'ಇರೋ ತನಕ ಜಾಲಿ... ಹೋದ ಮೇಲೆ ಖಾಲಿ... ಊರಿಗೊಂದು ಊಟ... ಮನೆಗೊಂದು ಫೋಟೊ, ಇಷ್ಟೇ ಕಣ್ರಿ ಜೀವನ' ಎಂಬ ಬದುಕಿನ ನಿರರ್ಥಕತೆಯ ಬಗೆಗಿರುವ ದಾರ್ಶನಿಕ ನುಡಿಗಳನ್ನು, 'ಲವ್ ಮಾಡಿದ್ರೆ ಲವ್ ಸ್ಟೋರಿ, ಕೈ ಕೊಟ್ರೆ ಕ್ರೈಮ್ ಸ್ಟೋರಿ'; 'ಪ್ರೀತಿಯ ಹುಡುಗ, ಮೋಸದ ಹುಡುಗಿ'; 'ನಲ್ಲೆಯ ಸಿಹಿ ನಗೆ, ನಲ್ಲ ಫುಲ್ ಹೊಗೆ'; 'ಎಬಿಸಿಡಿ ಕಲಿತ ನಾರಿ ಪ್ರೇಮಿ ಜೊತೆ ಪರಾರಿ'; 'ಪ್ರೀತ್ಸೊ ಮುನ್ನ ಯೋಚಿಸು ಚಿನ್ನ'; 'ಸಮುದ್ರದಲ್ಲಿ ಬಿದ್ದವನು ಮುತ್ತು ಎತ್ತಿದ, ಹುಡುಗಿಯರ ಹಿಂದೆ ಬಿದ್ದವನು ಭಿಕ್ಷೆ ಎತ್ತಿದ'; 'ಎಣ್ಣೆ ಏಟು ಮಧ್ಯಮ, ಲವ್ವಿನ ಏಟು ಅಂತಿಮ' ಎಂಬ ಬರಹಗಳಂತೂ ಭಗ್ನ ಪ್ರೇಮದ, ಪ್ರೀತಿಸಿದವಳ ಬಗ್ಗೆ ಇರುವ ಕ್ರೌರ್ಯದ ನಿರೂಪಣೆಯಂತೆ ಕಾಣಿಸುತ್ತದೆ.

ಖ್ಯಾತ ನಟ ಪುನೀತ್ ರಾಜ್‌ಕುಮಾರ್ ಅವರ ಸಾವಿನ ನಂತರ ಹೆಚ್ಚಿನ ಆಟೊ ಚಾಲಕರು ತಮ್ಮ ಆಟೊಗಳ ಮೇಲೆ ಅಪ್ಪು ಫೋಟೊ ಹಾಕಿಕೊಳ್ಳುವುದು, ನಿಲ್ದಾಣದಲ್ಲಿ ಪುಣ್ಯಸ್ಮರಣಾ ಕಾರ್ಯಕ್ರಮ ಏರ್ಪಡಿಸುವುದು ಅಪ್ಪು ಮೇಲಿನ ಕನ್ನಡಿಗರ ಅಭಿಮಾನದ ಮಹೋನ್ನತವೇ ಸರಿ.

ನನಗಂತೂ ರಜನಿಕಾಂತ್ ಅಭಿನಯದ 'ಬಾಶಾ', ವಿಷ್ಣುವರ್ಧನ್ ಅಭಿನಯದ 'ಸಾಹಸಸಿಂಹ', ದರ್ಶನ್ ಅಭಿನಯದ 'ಸಾರಥಿ', ಸುದೀಪ್ ಅಭಿನಯದ 'ರಂಗ ಎಸ್‌ಎಸ್‌ಎಲ್‌ಸಿ' ಅತ್ಯಾಪ್ತವಾಗುವುದು ಆಟೊ ಚಾಲಕನಾಗಿ ಅವರು ನಿರ್ವಹಿಸಿದ ನೆಲೆಗಳಿಂದಲೇ ಆಗಿವೆ. ಜೊತೆಗೆ 'ಬಾಶಾ'ದ 'ಆಟೊಕಾರ ಆಟೊಕಾರ', 'ಸಾರಥಿ'ಯ 'ಕೈ ಮುಗಿದು ಏರು ಇದು ಕನ್ನಡದ ತೇರು' ಗೀತೆಗಳನ್ನು ನೂರಾರು ಬಾರಿ ಕೇಳಿದರೂ ಸಾಕೆನಿಸದಷ್ಟು ಇಷ್ಟ.

ಏನೇ ಇರಲಿ ಬಾಪ ಮಾತ್ರ ಇಂತಹ ಯಾವ ಬರಹಗಳನ್ನು ತನ್ನ ತ್ವಾಹಾದ ಹಿಂದೆ ಹಾಕಿಸದಿದ್ದರೂ ಮಾಪಿಳಪಾಟ್‌ಗಳ ಅಭಿಮಾನಿಯಾಗಿದ್ದ ಕಾರಣದಿಂದ ಆಡಿಯೊ ಕ್ಯಾಸೆಟ್ ಹಾಕುವ ಸ್ಟಿರಿಯೊ ಪ್ಲೇಯರ್ ಮತ್ತು ದೊಡ್ಡ ಸ್ಪೀಕರ್ ಅನ್ನು ಮೈಸೂರಿನ ಗಾಂಧಿ ಚೌಕದಿಂದ ತಂದು ರಿಕ್ಷಾದ ಒಳಗೆ ಅಳವಡಿಸಿದ್ದ.

ಮಧ್ಯರಾತ್ರಿ ಆಸ್ಪತ್ರೆಗೋ, ತುರ್ತು ಕೆಲಸದ ಕಾರಣ ಎಲ್ಲಿಗಾದರೂ ಬಾಡಿಗೆಗೆ ಹೊರಟರೆ ಬಾಪನ ಸೀಟಿನಲ್ಲಿ ಅರ್ಧ ಸೀಟು ನನಗೆ ಮೀಸಲಿರುತ್ತಿತ್ತು. ಬಾಪನ ಸಹಾಯಕನಾಗಿ ಪ್ರತಿ ದಿನ ತ್ವಾಹನ ಮುಂಭಾಗಕ್ಕೆ ನೀರು ಹಾಕಿ ಮುಖ ತೊಳೆಯುವುದು, ವಾರಕ್ಕೊಮ್ಮೆ ನಮ್ಮೂರ ನದಿಯ ಬಳಿ ಒಂದು ರೂಪಾಯಿಯ ಕ್ಲಿನಿಕ್ ಪ್ಲಸ್ ಶಾಂಪು ಹಾಕಿ ಟಯರಿನಿಂದ ಇಂಜಿನ್ ಒಳಭಾಗದವರಗೂ ನೀರು ಹಾಕಿ ಸ್ನಾನ ಮಾಡಿಸುವ ಜವಾಬ್ದಾರಿ ನನ್ನ ಹೆಗಲೇರಿತ್ತು. ನದಿಯ ತಟದಲ್ಲಿ ಸಾಕಾನೆಗೆ ಸ್ನಾನ ಮಾಡಿಸುವ ಮಾದರಿಯಲ್ಲಿ ತ್ವಾಹನಿಗೂ ನಾನು ಸ್ನಾನ ಮಾಡಿಸುತ್ತಿದ್ದೆ.

ಮಳೆಗಾಲದಲ್ಲಂತೂ ಪ್ರತಿ ದಿನ ರಾಡಿಯಾದ ಕೆಸರಿನಲ್ಲಿ ಆಟವಾಡಿ ರಾಚಿಸಿಕೊಂಡು ಬರುವ ನಮ್ಮ ಮನೆಯ ಮುದ್ದುಮರಿ ತ್ವಾಹನಿಗೆ ಪುಣ್ಯಸ್ನಾನ ಮಾಡಿಸಲೇಬೇಕಾದ ಅನಿವಾರ್ಯತೆ. ತಿಂಗಳಿಗೊಮ್ಮೆ ತ್ವಾಹನ ಇಂಜಿನ್‌ನ ಒಳಭಾಗದಲ್ಲಿ ಮೆತ್ತಿಕೊಂಡಿರುವ ದೂಳುಮಿಶ್ರಿತ ಆಯಿಲ್ ಜಿಡ್ಡನ್ನು ತೆಗೆಯಲು ಹಳೆಯ ತುಂಡು ಬಟ್ಟೆಗೆ ಸೀಮೆಎಣ್ಣೆ ಅದ್ದಿ ಉಜ್ಜಿ, ತಿಕ್ಕಿ ಪಳಪಳ ಹೊಳೆಯುವಂತೆ ಮಾಡಬೇಕಾಗಿತ್ತು. ಈ ಕೆಲಸಗಳನ್ನು ಮಾಡುವಾಗ ನಾನು ಹಾಕಿಕೊಂಡ ಬಟ್ಟೆ ಮೇಲೆ ಆಯಿಲ್ ಕಲೆ ಆದರೆ ಉಮ್ಮನ ಕಡೆಯಿಂದ ನನಗೂ ಬಾಪನಿಗೂ ಮಹಾಮಂಗಳಾರತಿಯಂತೂ ಖಚಿತ.

ಆರ್‌ಟಿಓ ಮತ್ತು ಸಾರಿಗೆ ಇಲಾಖೆಯಿಂದ ಕೇವಲ 10 ಕಿಲೊ ಮೀಟರ್ ಮಾತ್ರ ಪ್ರಯಾಣ ಮಾಡಲು ಪರವಾನಗಿ ಇರುವ ನಮ್ಮ ತ್ವಾಹನಲ್ಲಿ ನಮ್ಮೂರಿನಿಂದ 80 ಕಿಲೋ ಮೀಟರ್ ದೂರ ಇರುವ ಎಮ್ಮೆ ಮಾಡುವಿನ ಸೂಫಿಶಹೀದರ ದರ್ಗಾಕ್ಕೆ ಉಮ್ಮ, ದಾದ ಮತ್ತು ನನ್ನನ್ನು ಬಾಪ ಕರೆದುಕೊಂಡು ಹೋಗಿದ್ದರು. ಕುಟುಂಬದ ಮದುವೆಗಳಿರಲಿ, ಉಪ್ಪಾಪನ ಮನೆಯೇ ಇರಲಿ, ಸಾವೇ ಇರಲಿ, ಸಮಾರಂಭಗಳೇ ಇರಲಿ ನಾವೆಲ್ಲ ತಯಾರಾಗಿ ತ್ವಾಹನನ್ನು ಕೂಡಿಕೊಂಡು ಹೊರಟುಬಿಡುತ್ತಿದ್ದೆವು. ಬಾಲ್ಯ ಕಾಲದ ಪ್ರಯಾಣಕ್ಕೆ ರೆಕ್ಕೆ ಕಟ್ಟಿ ಹಾರುವಂತೆ ಮಾಡಿದ ತ್ವಾಹನ ಜೊತೆಗಿನ ಪ್ರಯಾಣವಂತೂ ಅಪಾರವಾದ ಜೀವ ಚೈತನ್ಯವನ್ನು ನನ್ನೊಳಗೆ ತುಂಬಿಸಿತ್ತು.

ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ವಿರೋಧಿಸಿ ವಿರೋಧ ಪಕ್ಷಗಳು ಆಯೋಜಿಸಿದ ಭಾರತ್ ಬಂದ್ ಸಂದರ್ಭದಲ್ಲಿ ನಡೆದ ಘಟನೆ ಯಾವತ್ತಿಗೂ ಮರೆಯಲು ಸಾಧ್ಯವಿಲ್ಲ. ಶಾಲೆಗೂ ರಜೆ, ಬಾಪನಿಗೂ ರಜೆ. ತ್ವಾಹನನ್ನು ತೊಳೆಯಲು ಇದೇ ಸರಿಯಾದ ಸಮಯ ಎಂದು ಭಾವಿಸಿ ಒಂದು ಕಿಲೋ ಮೀಟರ್ ದೂರದ ನದಿಯ ತಟಕ್ಕೆ ಹೊರಟ ನಮಗೆ ಬಂದ್ ಕಾರಣದಿಂದಾಗಿ ಖಾಲಿ ಖಾಲಿಯಾಗಿದ್ದ ರಸ್ತೆಗಳು ಆಟೊ ಚಾಲನೆಯನ್ನು ಕಲಿಯಬೇಕೆಂಬ ಉತ್ಸಾಹ ಮೂಡಿಸಿತ್ತು. ಹಿಂದೆ ಕುಳಿತಿದ್ದ ನಾನು ಒಮ್ಮೆಲೇ ಜಿಗಿದು ಬಾಪನ ಸೀಟ್‌ಗೆ ಬಂದು ಎಕ್ಸಲೇಟರ್‌ಗೆ ಹೇಳದೆ ಕೇಳದೆ ಕೈಹಾಕಿದ್ದೆ. ಬಾಪನ ಬ್ಯಾಲೆನ್ಸ್ ತಪ್ಪಿಹೋಗಿತ್ತು. ನೇರವಾದ ರಸ್ತೆಯಲ್ಲಿ ಮೂರು ಚಕ್ರದ ಗಾಡಿ ವೇಗ ತಾಳಲಾರದೆ ತನ್ನ ನಿಯಂತ್ರಕ ಶಕ್ತಿಗೆ ಗುಡ್‌ಬೈ ಹೇಳಿತ್ತು.

ಮೂರು ಸುತ್ತು ಉರುಳಿ ಎಡಭಾಗಕ್ಕೆ ಬಿದ್ದು